ವಿಚಾರ ಲಹರಿ

# ಪ್ರಜ್ಞಾ ಸ್ವಾತಂತ್ರ್ಯ

ಮೊನ್ನೆ ಪಣಜಿಯಲ್ಲಿರುವಾಗ ಹೊಸದೊಂದು ಬಗೆಯ ಮೌಢ್ಯಾಚರಣೆಯನ್ನು ಕಂಡು ಆಘಾತವಾಯಿತು. ಅಲ್ಲಿ ಪ್ರತಿ ಎರಡು ವರ್ಷಕ್ಕೊಮ್ಮೆ ಶಿಗ್ಮೋತ್ಸವ ಎಂಬ ಹಬ್ಬವನ್ನು ಆಚರಿಸುತ್ತಾರೆ. ಅಲ್ಲಿಗೆ 65 ಕಿ.ಮಿ. ದೂರದಲ್ಲಿರುವ ಕಾಣಕೋಣ ಎಂಬ ಊರಿನಲ್ಲಿ ಶ್ರೀಮಲ್ಲಿಕಾರ್ಜುನ ದೇವಸ್ಥಾನವಿದೆ (ಕನ್ನಡದ ದೇವರು!) ಉತ್ಸವದ ಅಂಗವಾಗಿ ನಡೆಯುವ ಶಿಶಿರಾನ್ನಿ ಎಂಬ ಆಚರಣೆಯಿದೆ. ಅಂದರೆ ಮೂರು ಜನರು ತ್ರಿಭುಜಾಕೃತಿಯಲ್ಲಿ ತಮ್ಮ ತಲೆಗಳನ್ನಿಟ್ಟು ಮಲಗುತ್ತಾರೆ. ಅದು ತಲೆಗಳ ಒಲೆಯಾಗುತ್ತದೆ. ಅದರ ಮೇಲೆ ಮಡಕೆ ಇಟ್ಟು ಅನ್ನ ಬೇಯಿಸುತ್ತಾರೆ. ಮೂರು ತಲೆಗಳ ನಡುವೆ ಬೆಂಕಿ ಧಗಧಗ ಉರಿಯುತ್ತದೆ! ಅನ್ನ ಬೇಯುತ್ತದೆ! ಅದನ್ನು ಪ್ರಸಾದವೆಂದು ಹಂಚುತ್ತಾರೆ? ಇದನ್ನು ಒಂದು ಜಾತಿಯ, ಒಂದು ಕುಟುಂಬ ನಡೆಸಿಕೊಂಡು ಬರುತ್ತಿದೆ ಎಂದು ತಿಳಿದುಬಂತು. ದೇವರ ಹೆಸರಿನಲ್ಲಿ ಯಥೇಚ್ಛವಾಗಿ ನಡೆಯುವ ಪ್ರಾಣಿಬಲಿ ಈಗ ಕೇವಲ ಸುದ್ದಿಯಷ್ಟೆ. ಅಜಲು ತಿನ್ನುವುದು, ಎಂಜಲು ಎಲೆಯ ಮೇಲೆ ಉರುಳಾಡುವುದು ಇತ್ಯಾದಿ ಅಸಹ್ಯ ಹುಟ್ಟಿಸುವ ಆಚರಣೆಗಳು ಖಂಡನೆಗೆ, ಪ್ರತಿಭಟನೆಗೆ ಒಳಗಾಗುತ್ತವೆ. ಆದರೆ ಭಯ ಹುಟ್ಟಿಸುವ ಈ ಅಮಾನವೀಯ ಆಚರಣೆಯನ್ನು ಸಮಾಜ ಹೇಗೆ ಸಹಿಸಿಕೊಳ್ಳುತ್ತದೆ?

ಧರ್ಮ ಮನುಷ್ಯನಿಗೆ ಅನಿವಾರ್ಯ ಹೌದು. ಆದರೆ ದೇವರ ಹೆಸರಿನಲ್ಲಿ ಪ್ರಜ್ಞೆಯನ್ನು ಒತ್ತೆ ಇಡುವುದು ಎಷ್ಟು ಸರಿ, ತಮ್ಮ ಅಸ್ತಿತ್ವವನ್ನೆ ಪರಭಾರೆ ಮಾಡುವುದು ಎಷ್ಟು ಸರಿ? ಜರ್ಮನ್ ತತ್ವಜ್ಞಾನಿ ಕಾಂಟ್ ಜ್ಞಾನೋದಯ ಎಂಬುದು ಬಿಡುಗಡೆ ಅಥವಾ ಹೊರದಾರಿ (Way out) ಎಂದು ಹೇಳುತ್ತಾನೆ. ಧರ್ಮವೆಂಬುದು ಬಿಡುಗಡೆಯ ದಾರಿಯಾಗುವ ಬದಲು ಬಂಧನದ ಬಲೆಯಾಗಿಬಿಟ್ಟರೆ ಇಂತಹ ವಿಕೃತಗಳು ನಡೆಯಲು ಸಾಧ್ಯ. ಅಪಕ್ವತೆಯಿಂದ ಪರಿಪಕ್ವತೆಯ ಕಡೆಗೆ ನಡೆಯುವ ಪಯಣವೇ ಜ್ಞಾನೋದಯ. ನಮ್ಮ ತಿಳಿವಳಿಕೆಯನ್ನು ಒಂದು ಶಾಸ್ತ್ರ ನಿಯಂತ್ರಿಸಿದರೆ, ನಮ್ಮ ತೀರ್ಮಾನಗಳನ್ನು ಒಬ್ಬ ಜ್ಯೋತಿಷಿಗೆ ಒಪ್ಪಿಸಿಬಿಟ್ಟರೆ, ಅಜ್ಜ ಹೇಳಿದ್ದನ್ನು ಮಾತ್ರ ನಾವು ತಿನ್ನುವುದಾದರೆ ಸ್ವಂತ ಬುದ್ಧಿಗೆ ಜಾಗವೇ ಇರುವುದಿಲ್ಲ. ಆಗ ನಾವು ಪ್ರಜ್ಞಾಪೂರ್ವಕವಾಗಿ ಬದುಕುತ್ತಿರುವುದಿಲ್ಲ. ಅದಕ್ಕೆ ಕಾಂಟ್ ತಿಳಿಯುವುದಕ್ಕೂ ಧೈರ್ಯ ಬೇಕು ಎನ್ನುತ್ತಾನೆ. ಮೊದಲು ನಮ್ಮ ಸಮಾಜದ ಮುಗ್ಧ ಜನರಿಗೆ ಭಯದಿಂದ ಬಿಡುಗಡೆ ಬೇಕು. ಯೋಚಿಸುವುದನ್ನು ನಿಲ್ಲಿಸು; ಹಿರಿಯರು ಹೇಳಿದ್ದನ್ನಷ್ಟೆ ಪಾಲಿಸು. ಇಷ್ಟನ್ನು ಮಾತ್ರ ಧಾರ್ಮಿಕತೆ ಎಂದು ತಿಳಿಯುವುದಾದರೆ ಈ ಸಮಾಜವು ಪಕ್ವತೆಯ ಕಡೆಗೆ ಸಾಗುವುದೇ ಇಲ್ಲ. ಮನುಷ್ಯ ಪ್ರಶ್ನಿಸುವುದನ್ನು ಕಲಿತಾಗ ಮಾತ್ರ ಪ್ರಜ್ಞಾವಂತನಾಗಲು ಸಾಧ್ಯ. ಸಮಾಜವು ಪಕ್ವವಾಗಲು ಸಾಧ್ಯ. ದೇವರನ್ನು ಒಪ್ಪುವವರು ಅವನೊಬ್ಬ ಧರ್ಮಮಾರ್ಗದ ದಿಗ್ದರ್ಶಕ ಎಂಬುದನ್ನು ಮೊದಲು ಅರಿಯಬೇಕು. ಭಕ್ತರನ್ನು ಜೀತದಾಳುಗಳು ಎಂದು ನಂಬಿಸಿರುವವರು ಮಧ್ಯವರ್ತಿಗಳು.

ಜಗತ್ತಿನಲ್ಲಿಯೆ ಪ್ರಪ್ರಥಮವಾಗಿ ಜ್ಞಾನೋದಯ (Enlightenment) ಆದದ್ದು ಭಾರತದಲ್ಲಿಯೆ. ನಿನಗೆ ನೀನೇ ಬೆಳಕು ಎಂಬ ಬುದ್ಧನ ಹಿತವಾಣಿ ನಮಗೆ ಅರ್ಥವಾದಂತೆ ಕಾಣುವುದಿಲ್ಲ. ಜ್ಞಾನೋದಯವೆಂದರೆ ಅರಿವು ಪಡೆಯುವುದು ಅಥವಾ ಪ್ರಜ್ಞಾವಂತರಾಗುವುದು ಎಂದು ತಿಳಿದುಕೊಳ್ಳಬೇಕು. ಜಗತ್ತು ಹೇಗೆ ಹುಟ್ಟಿತೆಂಬ ಆದಿಕಾರಣವನ್ನು ತಿಳಿದುಕೊಳ್ಳುವುದು ಅಥವಾ ನಮ್ಮ ಮುಂದಿನ ಭವಿಷ್ಯವನ್ನು ತಿಳಿದುಕೊಳ್ಳುವುದು ಎಂದಲ್ಲ. ನಾಮ ರೂಪಗಳನ್ನು (ಮನಸ್ಸು ಮತ್ತು ದೇಹ) ಹೊಂದಿರುವ ನಾನು ಈ ನೆಲಕ್ಕೆ ಹೇಗೆ ಸಂಬಂಧಿಸಿಕೊಳ್ಳಬೇಕು ಎಂಬ ಅರಿವು ಅದು. ದುರದೃಷ್ಟವಶಾತ್ ನಮ್ಮ ಸಮಾಜಕ್ಕೆ ಬೇಕಾಗಿರುವುದು ಅದಲ್ಲ. ನಮಗೆ ಬೇಕಾಗಿರುವುದು ನಮ್ಮ ಅನುಭವಕ್ಕೆ ಬಾರದ ಒಂದು ಅಲೌಕಿಕ ಸುಳ್ಳು. ಅದರಿಂದ ಸಮೂಹ ಜ್ಞಾನದ ಬದಲು ಸಮೂಹ ಸನ್ನಿ ಹಿಡಿಯುವುದೇ ಹೆಚ್ಚು. ಸಾರ್ವತ್ರಿಕವೂ, ಸ್ವತಂತ್ರವೂ, ಸಾರ್ವಜನಿಕ ಒಳಿತಿಗೆ ಉಪಯುಕ್ತವೂ ಆದ ವೈಚಾರಿಕ ಪ್ರಜ್ಞೆಯನ್ನು ಜ್ಞಾನೋದಯವೆಂದು ಕರೆಯಬಹುದೆಂದು ಮೈಕೆಲ್ ಫುಕೋ ಹೇಳುತ್ತಾನೆ.

ಬುದ್ಧಿ ಪರಾಧೀನವಾದೊಡನೆಯೆ ಚಿಂತನೆಯನ್ನು ನಿಲ್ಲಿಸುತ್ತದೆ. ನಮ್ಮ ಧರ್ಮ, ಪರಿಸರ ಕೇವಲ ಹಿಂಬಾಲಿಸುವುದನ್ನು, ಪಾಲಿಸುವುದನ್ನು ಕಲಿಸಿದರೆ ವಿಚಾರ ಮಾಡಲು ಆಸ್ಪದವೇ ಇರುವುದಿಲ್ಲ. ಕೇವಲ ಕುರಿಗಳಾಗಿ ಮಂದೆಯಲ್ಲಿ ಒಂದಾಗುತ್ತೇವೆ. ಮಂದೆಯಲ್ಲಿ ಒಂದಾಗುವುದೆಂದರೆ ಪ್ರಜ್ಞಾ ಸ್ವಾತಂತ್ರ್ಯವನ್ನು (Freedom of conscience) ಕಳೆದುಕೊಳ್ಳುವುದು. ಕೇವಲ ಇತರರು ಹೇಳಿದ್ದನ್ನು ಪಾಲಿಸುವುದರಿಂದ, ಹಿಂಬಾಲಿಸುವುದರಿಂದ ನಮ್ಮ ಸಮಾಜ ಯೋಚಿಸುವ ಹಕ್ಕನ್ನು ಕಳೆದುಕೊಂಡಿದೆ. ಅಂಧಾನುಕರಣೆಯಲ್ಲಿ ತೊಡಗಿದೆ. ವಿಧೇಯತೆ ಅನ್ನುವುದು ಕೇವಲ ಮೂರ್ಖರ ಸ್ವತ್ತು. ಶಿಶಿರಾನ್ನಿಗೆ ಒಲೆಯೊಡ್ಡಿದ ತಲೆಗಳು ಒಡೆಯದಿರಲಿ.

■ ಮೂಚಿ

## ಮಾತೇ ಮುತ್ತು

★ ಪ್ರಾಜ್ಞರಾದವರಿಂದ ಯಾವನು ತಿಳಿವಳಿಕೆಯನ್ನು ಹೊಂದುತ್ತಾನೋ ಅವನು ಪಂಡಿತ.

-ಮಹಾಭಾರತ

★ ಸಣ್ಣ ಕಾರ್ಯಕ್ಕೇ ಆದರೂ ಒಂದೇ ಉಪಾಯ ಫಲಿಸದು. ಕಾರ್ಯ ಸಾಧನೆಯ ವಿಷಯದಲ್ಲಿ ಯಾವನು ಅನೇಕ ಉಪಾಯಗಳನ್ನು ತಿಳಿದಿರುವನೋ ಅವನು ಕಾರ್ಯಗಳನ್ನು ಸಾಧಿಸಬಲ್ಲನು.

-ರಾಮಾಯಣ

★ ಯಾವ ಕೆಲಸ ಮಾಡಿದರೆ ಅಂತರಾತ್ಮನಿಗೆ ಸಂತೋಷವಾಗುವುದೋ ಅದನ್ನು ಪ್ರಯತ್ನಪೂರ್ವಕವಾಗಿ ಮಾಡಬೇಕು.

-ಮನುಸ್ಮೃತಿ

★ ಒಂದೇ ದಿನದಲ್ಲಿ ಎಲ್ಲ ಹಾಲನ್ನು ಒಟ್ಟಿಗೇ ಕರೆಯುತ್ತೇನೆ ಎಂದುಕೊಂಡು ಹಲವು ದಿನಗಳು ಸುಮ್ಮನಿದ್ದು, ಬಳಿಕ ಕರೆದರೆ ಹಿಂದಿನ ಹಾಲು ಹೇಗೆ ಬರುತ್ತದೆ?

-ನೀತಿ ಸಾರೋದಯ

★ ಮನುಷ್ಯನಿಗೆ ರೂಪ ಆಭರಣ, ರೂಪಕ್ಕೆ ಗುಣ ಆಭರಣ, ಆ ಗುಣಕ್ಕೆ ಜ್ಞಾನ ಆಭರಣ, ಜ್ಞಾನಕ್ಕೆ ಕ್ಷಮೆ ಆಭರಣ.

-ಕಿರಾತಾರ್ಜುನೀಯ

★ ಚೆನ್ನಾಗಿ ವಿಚಾರ ಮಾಡಿ ಉತ್ತರ ಕೊಡಬೇಕೇ ವಿನಾ ತಟ್ಟನೆ ಒಮ್ಮೆಯೂ ಮಾತನಾಡಬಾರದು.

-ಚಾಣಕ್ಯ

★ ಓದುವವರು, ಓದಿಸುವವರು, ಅಲ್ಲದೆ ಇತರ ಶಾಸ್ತ್ರಗಳನ್ನು ತಿಳಿದವರು –ಇವರನ್ನೆಲ್ಲ ಶಾಸ್ತ್ರ ವ್ಯಸನಿಗಳೆಂದೇ ತಿಳಿಯಬೇಕು. ಯಾವನು ಕ್ರಿಯಾಶೀಲನೋ ಅವನೇ ಪಂಡಿತ.

-ಹಿತೋಪದೇಶ

★ ಎದುರಾಳಿಯನ್ನು ಹೊಡೆದು ಉರುಳಿಸುವವನು ವೀರನಾಗಲಾರ! ಕೋಪ ಬಂದಾಗ ಸಹನೆ ತಪ್ಪಿ ನಡೆಯದವನೇ ನಿಜವಾದ ವೀರ.

-ಮಹಮ್ಮದ್ ಪೈಗಂಬರ್

★ ದರಿದ್ರ ನಾರಾಯಣನಿಂದ ದೋಚಿದ ಹಣ ಶ್ರೀಮಂತನ ಗೋರಿಯ ನಿರ್ಮಾಣಕ್ಕೆ ಮೀಸಲು.

-ಅನಾಮಿಕ

★ ಹುಲ್ಲು ಕೂಡ ಆಹಾರವಾಗಿ ಹಸುಗಳಿಗೆ ಒದಗುತ್ತದೆ. ಉಪಕಾರ ಬುದ್ಧಿ ಇಲ್ಲದ ಮನುಷ್ಯ ಹುಲ್ಲಿಗಿಂತ ಕೀಳು.

-ಕಥಾ ಸರಿತ್ಸಾಗರ

★ ತನಗಿಂತ ಮೇಲು ಮೇಲಿನವರನ್ನು ನೋಡುತ್ತಿದ್ದರೆ ಎಲ್ಲರೂ ದರಿದ್ರರಾಗುತ್ತಾರೆ. ತನಗಿಂತ ಕೆಳಗಿನ ಮಟ್ಟದವರನ್ನು ನೋಡುತ್ತಿದ್ದರೆ ಮಹಿಮಾನ್ವಿತರಾಗುತ್ತಾರೆ.

-ಭೋಜ ಚರಿತ್ರೆ

★ ಕ್ಷಮೆಗೆ ಸಮಾನವಾದ ತಪಸ್ಸಿಲ್ಲ. ಸಂತೋಷಕ್ಕಿಂತ ಹೆಚ್ಚಿನ ಸುಖವಿಲ್ಲ. ಆಸೆಗಿಂತ ಮಿಗಿಲಾದ ರೋಗವಿಲ್ಲ. ದಯೆಗಿಂತ ಮಿಗಿಲಾದ ಧರ್ಮವಿಲ್ಲ.

-ಸೂಕ್ತಿ ಮುಕ್ತಾವಳಿ